**ಪತ್ರಿಕಾ ಪ್ರಕಟಣೆ**

**ವಿಜಯಪುರ**
**ದಿನಾಂಕ: 17.08.2021.**

**1] ಇಂಡಿ ಗ್ರಾಮೀಣ ಪೊಲೀಸ ಠಾಣೆ ಗುನ್ನೆ ನಂ: 152/2021 ಕಲಂ: 342, 302, ಐ.ಪಿ.ಸಿ.**

ದಿನಾಂಕ: 16.08.2021 ರಂದು ಮುಂಜಾನೆ 10;30 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ 1]. ವಿಶ್ವೇಶ್ವರಯ್ಯಾ. ಲೋಟಯ್ಯಾ. ಹಿರೇಮಠ. ಸಾ॥ ನಾರಾಯಣಪೂರ ತಾ॥ ಅಪ್ಜಲ್‌ಪೂರ ಹಾಲಿ ವಸ್ತಿ ಬುಯ್ಯಾರ ತಾ॥ ಇಂಡಿ ಈತನು ಈಗ ಒಂದು ವರ್ಷದ ಹಿಂದೆ ಗುರುಲಿಂಗವ್ವ ಇವಳು ತನ್ನ ಮಗ ವಿಶ್ವೇಶ್ವರಯ್ಯಾ ಈತನಿಗೆ ಇವಳಿಗೆ ಕೊಡುವ ಸಲುವಾಗಿ ಕೇಳಿದ್ದು, ಆಗ ನನ್ನ ಹೆಂಡತಿ ಅನ್ನಪೂರ್ಣ ಇವಳು ಅವನು ಯಾವುದೇ ಕೆಲಸ ಮಾಡುವದಿಲ್ಲಾ ನೌಕರಿನೂ ಇಲ್ಲಾ ಅವನಿಗೆ ಕೊಡುವದಿಲ್ಲಾ ಅಂದಿದ್ದಕ್ಕೆ ವಿಶ್ವೇಶ್ವರಯ್ಯಾ ಇವನು ಸಿಟ್ಟಾಗಿದ್ದನು. ಅಲ್ಲದೇ ಇತ್ತಿತ್ತಲಾಗಿ ಒಂದೆರಡು ತಿಂಗಳ ಹಿಂದೆ ನಾಗನಸೂರಕ್ಕೆ ಹೋದಾಗ ನಾಗನಸೂರ ನನ್ನ ಹೆಂಡತಿಯ ಚಿಕ್ಕಪ್ಪನ ಮಗನಿಗೆ ತೆಗೆದುಕೊಳ್ಳುವ ಸಲುವಾಗಿ ಮಾತನಾಡಿದ್ದು, ಇನ್ನೂ ಕೆಲವು ದಿವಸಗಳಲ್ಲಿ ನಿಶ್ಚಯ ಮಾಡುವದು ಇತ್ತು, ಅದರಿಂದಾಗಿ ನನ್ನ ಮಗಳಿಗೆ ಬೇರೆ ಕಡೆಗೆ ಕೊಡುತ್ತಾರೆಂದು ಸಿಟ್ಟಾಗಿ ಅವಳಿಗೆ ಕೊಲೆ ಮಾಡಿದರೆ ಯಾರಿಗೆ ಕೊಡುತ್ತಾರೆ ನೋಡೋಣ ಅಂತಾ ಆರೋಪಿತನಾದ ವಿಶ್ವೇಶ್ವರಯ್ಯಾ. ಲೋಟಯ್ಯಾ. ಹಿರೇಮಠ. ಸಾ॥ ನಾರಾಯಣಪೂರ ತಾ॥ ಅಪ್ಜಲ್‌ಪೂರ ಹಾಲಿ ವಸ್ತಿ ಬುಯ್ಯಾರ ತಾ॥ ಇಂಡಿ ಈತನು ನನ್ನ ಮಗಳಿಗೆ ಕೊಲೆ ಮಾಡುವ ಉದ್ದೇಶ ಹೊಂದಿ ಹೊಂಚು ಹಾಕಿ ದಿನಾಂಕ; 16.08.2021 ರಂದು ದಾನಮ್ಮ ವಯಾ 18 ವರ್ಷ ಇವಳು ತನ್ನ ಅಜ್ಜಿಗೆ ಊಟ ತೆಗೆದುಕೊಂಡು ಹೋದಾಗ ಆರೋಪಿತನು ಅವಳನ್ನು ಮನೆಯಲ್ಲಿ ಕೂಡಿ ಹಾಕಿ ಚಾಕುದಿಂದ ಅವಳ ತಲೆಗೆ, ಬೆನ್ನಿಗೆ ಕೈಗಳಿಗೆ ಹೊಡೆದು ಭಾರಿ ಪೆಟ್ಟು ಗಾಯ ಪಡಿಸಿದ್ದು ಅವಳನ್ನು ಉಪಚಾರಕ್ಕೆ ಇಂಡಿ ಸರಕಾರಿ ದವಾಖಾನೆಗೆ ತೆಗೆದುಕೊಂಡು ಬರುತ್ತಿದ್ದಾಗ ಇಂಡಿ ಬಸ್‌ಸ್ಟ್ಯಾಂಡ ಹತ್ತಿರ ಮುಂಜಾನೆ 11;30 ಗಂಟೆಯ ಸುಮಾರಿಗೆ ಮೃತಪಟ್ಟಿರುತ್ತಾಳೆ. ಈ ಬಗ್ಗೆ ಶಿವರುದ್ರಯ್ಯಾ. ಶಿವಲಿಂಗಯ್ಯಾ. ಹಿರೇಮಠ. ಸಾ॥ ಬುಯ್ಯಾರ. ತಾ॥ ಇಂಡಿ. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 16.08.2021 ರಂದು ಇಂಡಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಮನಗೂಳಿ ಪೊಲೀಸ ಠಾಣೆ ಗುನ್ನಾ. ನಂ: 97/2021 ಕಲಂ: 279, 337, 338, 304(ಎ) ಐ.ಪಿ.ಸಿ.**

ದಿನಾಂಕ 16.08.2021 ರಂದು ಸಂಜೆ 4:30 ರಿಂದ 5:00 ಗಂಟೆ ನಡುವೆ ಇದರಲ್ಲಿಯ ಆರೋಪಿತನಾದ ಗಣಪತಿ ತಂದೆ ಮಡಿವಾಳಪ್ಪ ಹೂಗಾರ ಸಾ: ಡೋಣೂರ ಡಿಸ್ಕರಿ ಕಂಪನಿಯ ಬೈಕ ನಂಬರ ಕೆಎ:25 ಇಜಿ:1434 ನೇದ್ದರ ಚಾಲಕ ಈತನು ತಾನು ನಡೆಸುತ್ತಿದ್ದ ಡಿಸ್ಕರಿ ಕಂಪನಿಯ ಬೈಕ ನೇದ್ದನ್ನು ಜೋರಾಗಿ ಹಾಗೂ ನಿಷ್ಕಾಳಜಿತನದಿಂದ ನಡೆಯಿಸಿ ಮೋದಿನಸಾಬ ದಸ್ತಗೀರಸಾಬ ಬಾಗವಾನ ವಯಾ 65 ವರ್ಷ ಈತನಿಗೆ ಹಾಯಿಸಿ ಅಪಘಾತ ಮಾಡಿ ಭಾರಿ ಗಾಯ ಪಡಿಸಿ ಸ್ಥಳದಲ್ಲಿಯೇ ಮರಣ ಪಡಿಸಿದ್ದು, ಅಲ್ಲದೇ ಸದರಿ ಗಣಪತಿ ಹೂಗಾರ ಇವನು ಕೂಡ ಸಾದಾ ವ ಭಾರಿ ಸಹ ಗಾಯ ಹೊಂದಿರುತ್ತಾನೆ ಈ ಬಗ್ಗೆ ಶ್ರೀಮತಿ. ಮಕ್ಕಾಮಾ ಗಂಡ ಮೋದಿನ ಸಾಬ ಬಾಗವಾನ ಸಾ: ಮಸಿಬಿನಾಳ ತಾ: ಬಸವನ ಬಾಗೇವಾಡಿ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 16.08,2021 ರಂದು ಮನಗೂಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ತಿಕೋಟಾ ಪೊಲೀಸ ಠಾಣೆ ಗುನ್ನಾ. ನಂ: 125/2021 ಕಲಂ: 279, 304(ಎ), ಐಪಿಸಿ**

ದಿನಾಂಕ 16.08.2021 ರಂದು ಸಾಯಂಕಾಲ 17.45 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಮೃತ್: ಜಟ್ಟೆಪ್ಪ ಬೂತಾಳಿಸಿದ್ದ ದೂಮಕನಾಳ ವಯಾ–38 ವರ್ಷ ಸಾ:ಕನಮಡಿ. ಮೋಟಾರ್ ಸೈಕಲ್ ನಂ ಕೆಎ:23 ಕೆ:5705 ನೇದ್ದರ ಚಾಲಕ ಈತನು ತಾನೂ ನಡೆಸುತ್ತಿದ್ದ ಮೋಟಾರ್ ಸೈಕಲ್ ನೇದ್ದರ ಮೇಲೆ ಸಿದ್ದನಾಥ ಕಡೆಯಿಂದ ಕನಮಡಿ ಕಡೆಗೆ ಅತೀ ಜೋರಾಗಿ ಮತ್ತು ನಿರ್ಲಕ್ಷತನದಿಂದ ನಡೆಯಿಸಿಕೊಂಡು ಬಂದು ಧರೆಪ್ಪ ಗೌರಗೊಂಡ ಈತನ ಜಮೀನದ ಹತ್ತೀರ ರಸ್ತೆಯ ಮೇಲೆ ನಾಯಿ ಅಡ್ಡ ಬಂದಿದ್ದರಿಂದ ನಾಯಿಗೆ ಹಾಯಿಸಿ ತಾನೇ ಮೊಟಾರ್ ಸೈಕಲ್ ಸಮೇತ ರೋಡ ಮೇಲೆ ಬಿದ್ದು ತಲೆಗೆ, ಮುಖಕ್ಕೆ, ಬಲತೋಡೆಗೆ,ಬಲಗೈ ಮುಂಗೈಗೆ ಭಾರಿ ವ ಸಾಧಾ ರಕ್ತ ಗಾಯ ಹೊಂದಿ ಸ್ಥಳದಲ್ಲಿಯೇ ಮರಣ ಹೊಂದಿದ್ದು ಇರುತ್ತದೆ. ಈ ಬಗ್ಗೆ ಚೆನ್ನವ್ವ ಜಟ್ಟೆಪ್ಪ ದೂಮಕನಾಳ ಸಾ:ಕನಮಡಿ ತಾ:ತಿಕೋಟಾ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 16.08,2021 ರಂದು ತಿಕೋಟಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**4] ವಿಜಯಪುರ ಗ್ರಾಮೀಣ ಪೊಲೀಸ ಠಾಣೆ ಗುನ್ನಾ. ನಂ: 260/2021 ಕಲಂ: 87 ಕೆ.ಪಿ.ಆ್ಯಕ್ಟ**

ದಿನಾಂಕ 16.08.2021 ರಂದು 17:30 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತರಾದ 1] ಖಾಜಾಅಮೀನ ಹುಸೇನಸಾಬ 2] ಪೈಗಂಬರ ಮೈಬೂಬಸಾಬ ಬಡೇಗಾರ 3] ಸೈಯದಸಾಬ ಸಂದಾನಸಾಬ ಬಡೇಗಾರ 4] ಉಸ್ಮಾನ ಬಂದಗಿಸಾಬ ದಳವಾಯಿ 5] ಗೌಸಪಾಕ ಅಲ್ಲಾಸಾಬ ಬಡೇಗಾರ 6] ಈರಣ್ಣ ಶರಣಪ್ಪ ವಾಲೀಕಾರ 7] ಶರಣಪ್ಪ ಶಿವಪ್ಪ ಬಬಲೇಶ್ವರ 8] ಶ್ರೀಕಾಂತ ಮಲ್ಲಪ್ಪ ಇಬ್ರಾಹಿಮಪೂರ 9] ಕುದಾಭಕ್ಷ ಬಾಬುಸಾಬ ಬಡೇಗಾರ 10] ಅಲ್ತಾಫ ಬಂದೇನವಾಜ ದಳವಾಯಿ 11] ಅಬ್ಬಾಸಅಲಿ ಮುರ್ತುಜ ಬಡೇಗಾರ 12] ಅನ್ವರ ಹಸನಸಾಬ ಶಿರಪನಹಳ್ಳಿ 13] ಪ್ರಮೋದ ಮಲ್ಲಪ್ಪ ನಾಯ್ಕೋಡಿ 14] ರಾಜಭಕ್ಷ ಇಬಾಹಿಂ ಶೇಖ ಸಾ॥ ಎಲ್ಲರೂ ಕತ್ನಳ್ಳಿ ಇವರು ಕತ್ನಳ್ಳಿ ಗ್ರಾಮದ ಲಾಲಸಾಬ ದರ್ಗಾದ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಕುಳಿತು ತಮ್ಮ ತಮ್ಮ ಫಾಯ್ದೇಗೋಸ್ಕರ ಇಸ್ಪೇಟ ಎಲೆಗಳ ಮೇಲೆ ಹಣವನ್ನು ಬೆಟ್ಟ ಕಟ್ಟಿ ಅಂದರ–ಬಾಹರ ಅಂಬುವ ಇಸ್ಪೇಟ ಮನ್ನಾ ಜೂಜಾಟ ಆಡುತ್ತಿದ್ದಾಗ ಸಿಕ್ಕ ಅಪರಾಧ. ಜಪ್ತಾದ ಮಾಲು: ಹಣ–10500/–, 2) 52 ಇಸ್ಪೇಟ ಎಲೆಗಳು ಕಿ॥ 00=00 ಈ ಬಗ್ಗೆ *ಸ:ತ:* ಜಿ ಎಸ್ ಉಪ್ಪಾರ ಪಿಎಸ್ಐ ರೂರಲ್ ಪಿಎಸ್ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 16.08,2021 ರಂದು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**5] ಚಡಚಣ ಪೊಲೀಸ ಠಾಣೆ ಗುನ್ನಾ. ನಂ: 81/2021 ಕಲಂ: 78 (3) ಕೆ.ಪಿ ಆ್ಯಕ್ಟ್ & 420, ಐಪಿಸಿ**

ದಿನಾಂಕ 16.08.2021 ರಂದು ಮದ್ಯಾಹ್ನ 2.30 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ರಮಜಾನ ಖಾಸಿಮಸಾಬ ಮುಲ್ಲಾ, ಸಾ: ಉಮರಾಣಿ.ತಾ: ಚಡಚಣ. ಈತನು ಚಡಚಣ ತಾಲೂಕಿನ ಉಮರಾಣಿ ಗ್ರಾಮದ ಹನುಮಾನ ದೇವಸ್ಥಾನದ ಗುಡಿಯ ಮುಂದೆ ಸಾರ್ವಜನಿಕ ಸ್ಥಳದಲ್ಲಿ ನಿಂತು ತನ್ನ ಪಾಯ್ದೆಗೋಸ್ಕರ 01/– ರೂಪಾಯಿಗೆ 80/– ರೂಪಾಯಿ ಕೊಡುವ ಕರಾರಿನ ಮೇರೆಗೆ ಜನರಿಗೆ ಮೋಸ ಮಾಡುವ ಉದ್ದೇಶದಿಂದ ಜನರಿಂದ ಹಣ ತೆಗೆದುಕೊಂಡು ಕಲ್ಯಾಣ ಮಟಕಾ ಅನ್ನುವ ಓ.ಸಿ ಜೂಜಾಟದ ಅಂಕಿ ಸಂಖ್ಯೆಗಳನ್ನು ಬರೆದುಕೊಳ್ಳುವಾಗ 1] ಅಂಕಿ ಸಂಖ್ಯೆಗಳು ಬರೆದ ಓ.ಸಿ ಚೀಟಿ ಒಂದು, ಕಿಮ್ಮತ್–00=00, 2] ಚಾಲು ಸ್ಥಿತಿಯಲ್ಲಿದ್ದ ಪೆನ್ನು ಒಂದು ಅ:ಸ: ಕಿಮ್ಮತ 00=00, 3] ರೋಖ ಹಣ: 530/–ರೂಪಾಯಿಗಳು. ಮತ್ತು ಸಲಕರಣೆಗಳ ಸಮೇತ ಸಿಕ್ಕ ಅಪರಾಧ. ಒಟ್ಟು ಜಪ್ತಾದ ಹಣ: 530/–ರೂಗಳು ಈ ಬಗ್ಗೆ *ಸ:ತ:* ಎಮ್.ಎ. ಸತಿಗೌಡರ ಪಿ.ಎಸ್.ಐ, ಚಡಚಣ ಪಿ.ಎಸ್. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 16.08,2021 ರಂದು ಚಡಚಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**6] ಇಂಡಿ ಗ್ರಾಮೀಣ ಪೊಲೀಸ ಠಾಣೆ ಗುನ್ನಾ. ನಂ: 153/2021 ಕಲಂ: 78 (3) ಕೆ.ಪಿ ಆ್ಯಕ್ಟ್.**

ದಿನಾಂಕ 16.08.2021 ರಂದು 1450 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಗುರಪ್ಪ ಮಲ್ಲಪ್ಪ ಗುಬ್ಬೇವಾಡ ಸಾ॥ ಲಚ್ಯಾಣ ತಾ॥ ಇಂಡಿ ಈತನು ತನ್ನ ಫಾಯ್ದೆಗೋಸ್ಕರ ಸಾರ್ವಜನಿಕ ಸ್ಥಳದಲ್ಲಿ ಕುಳಿತು ಸಾರ್ವಜನಿಕರಿಗೆ 1 ರೂಪಾಯಿಗೆ 80 ರೂಪಾಯಿ ಕೊಡುತ್ತೇನೆ. ಓಸಿ ಆಡಲು ಬನ್ನಿರಿ ಅಂತಾ ಕರೆದು ಅವರಿಂದ ಹಣ ಪಡೆದುಕೊಂಡು ಅಂಕಿ ಸಂಖ್ಯೆಗಳ ಆಧಾರದ ಮೇಲೆ ಕಲ್ಯಾಣ ಓ.ಸಿ.ಮಟಕಾ ಅಂಬುವ ಜೂಜಾಟವನ್ನು ಆಡಿಸುತ್ತಿರುವಾಗ ಸಿಕ್ಕಿದ್ದು, ಈ ಬಗ್ಗೆ *ಸ:ತ:* ಆಯ್. ಎಮ್. ದುಂಡಸಿ ಪೊಲೀಸ ಸಬ್ ಇನ್ಸಪೆಕ್ಟರ್ ಇಂಡಿ ಗ್ರಾಮೀಣ ಪೊಲೀಸ್ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 16.08,2021 ರಂದು ಇಂಡಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.